**All India Radio: Bangalore**
**National Bulletin In Kannada**
**23.02.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**23.02.2026 1.10 pm**

**<>><><*><><<>**

ಮುಖ್ಯಾಂಶಗಳು

**೧. ಶಾಂತಿ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಯುವಕರ ದೂರದೃಷ್ಟಿಗೆ ಎಐ ಇಂಪ್ಯಾಕ್ಟ್ ಶೃಂಗಸಭೆ ಸ್ಪಷ್ಟ ನಿದರ್ಶನ : ಪ್ರಧಾನಿ ನರೇಂದ್ರ ಮೋದಿ ಅಭಿಮತ**

**೨. ರಾಷ್ಟ್ರಪತಿ ಭವನದಲ್ಲಿ ಇಂದು ರಾಜಾಜಿ ಉತ್ಸವ; ನಾಳೆಯಿಂದ ಮಾರ್ಚ್ ೧ರವರೆಗೆ ಸಿ. ರಾಜಗೋಪಲಚಾರಿ ಕುರಿತು ವಸ್ತು ಪ್ರದರ್ಶನ**

**೩. ಬಾಫ್ಟಾ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಮಕ್ಕಳ ಮತ್ತು ಕುಟುಂಬ ಪ್ರಶಸ್ತಿಗೆ ಮಣಿಪುರ ಭಾಷೆಯ ಚಲನಚಿತ್ರ ಬೂಂಗ್ ಭಾಜನ**

**೪. ನೇಪಾಳ ಕಠ್ಮಂಡುವಿನಲ್ಲಿ ಭೀಕರ ರಸ್ತೆ ಅಪಘಾತ ; ೧೮ ಜನರ ಸಾವು, ಹಲವು ಮಂದಿಗೆ ಗಾಯ**

**೫. ಟಿ-೨೦ ವಿಶ್ವಕಪ್ ಕ್ರಿಕೆಟ್ : ಸೂಪರ್ ೮ ಹಂತದಲ್ಲಿ ಇಂದು ವೆಸ್ಟ್ ಇಂಡೀಸ್ - ಜಿಂಬಾಬ್ವೆ ತಂಡಗಳು ಮುಖಾಮುಖಿ**

**<>><><*><><<>**

ನವದೆಹಲಿಯಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಈ ಸಂಬಂಧ ಇಂದು ಸಾಮಾಜಿಕ ಮಾಧ್ಯಮದಲ್ಲಿ ಸಂಸ್ಕೃತ ಸುಭಾಷಿತಂವನ್ನು ಹಂಚಿಕೊಂಡಿರುವ ಪ್ರಧಾನಿ, ಐತಿಹಾಸಿಕ ಶೃಂಗಸಭೆಯು ಭಾರತದ ಸಾಮರ್ಥ್ಯಗಳ ಬಗ್ಗೆ ವ್ಯಾಪಕ ಜಾಗತಿಕ ಮೆಚ್ಚುಗೆಗೆ ಸಾಕ್ಷಿಯಾಗಿದೆ ಎಂದು ಹೇಳಿದ್ದಾರೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಯುವಕರ ದೂರದೃಷ್ಟಿಯ ಮನಸ್ಥಿತಿಯು ಮಾನವೀಯತೆಗೆ ಹೇಗೆ ಹೆಚ್ಚು ಪ್ರಯೋಜನವನ್ನು ನೀಡುತ್ತದೆ ಎಂಬುದನ್ನು ಇದು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದ್ದಾರೆ.

**<>><><*><><<>**

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಇಂದು ರಾಜಾಜಿ ಉತ್ಸವವನ್ನು ಆಚರಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದಾರೆ. ರಾಷ್ಟ್ರಪತಿ ಭವನದ ಸೆಂಟ್ರಲ್ ಪ್ರಾಂಗಣದಲ್ಲಿರುವ ಬ್ರಿಟಿಷ್ ವಾಸ್ತುಶಿಲ್ಪಿ ಎಡ್ವಿನ್ ಲುಟಿಯೆನ್ಸ್ ಅವರ ಪ್ರತಿಮೆಯ ಬದಲಿಗೆ ಸ್ವತಂತ್ರ ಭಾರತದ ಮೊದಲ ಭಾರತೀಯ ಗವರ್ನರ್ ಜನರಲ್

ಸಿ.ರಾಜಗೋಪಾಲಾಚಾರಿ ಅವರ ಪ್ರತಿಮೆಯನ್ನು ಸ್ಥಾಪಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ. ಸಿ. ರಾಜಗೋಪಾಲಾಚಾರಿ ಅವರು ಅಧಿಕಾರವನ್ನು ಒಂದು ಸ್ಥಾನವಾಗಿ ನೋಡದೆ ಸೇವೆಯ ಒಂದು ರೂಪವಾಗಿ ನೋಡಿದ ನಾಯಕರಲ್ಲಿ ಒಬ್ಬರು ಎಂದು ಪ್ರಧಾನಿ ಶ್ಲಾಘಿಸಿದ್ದಾರೆ. ಸ್ವಾತಂತ್ರ್ಯದ ನಂತರವೂ ಬ್ರಿಟಿಷ್ ಆಡಳಿತಗಾರರ ಪ್ರತಿಮೆಗಳನ್ನು ರಾಷ್ಟ್ರಪತಿ ಭವನದಲ್ಲಿ ಉಳಿಯಲು ಅವಕಾಶ ನೀಡಲಾಗಿದ್ದು, ಭಾರತದ ಶ್ರೇಷ್ಠ ಪುತ್ರರ ಪ್ರತಿಮೆಗಳಿಗೆ ಸ್ಥಳಾವಕಾಶ ನಿರಾಕರಿಸಲಾಗಿದೆ ಎಂಬುದು ದುರದೃಷ್ಟಕರ ಎಂದು ಅವರು ಹೇಳಿದರು. ರಾಜಾಜಿ ಉತ್ಸವದ ಅಂಗವಾಗಿ ಫೆಬ್ರವರಿ ೨೪ ರಿಂದ ಮಾರ್ಚ್ ೧ ರವರೆಗೆ ಸಿ. ರಾಜಗೋಪಾಲಾಚಾರಿ ಅವರ ಕುರಿತ ವಸ್ತು ಪ್ರದರ್ಶನವೂ ನಡೆಯಲಿದೆ.

<>><><*><><<>

ಮಣಿಪುರಿ ಭಾಷೆಯ ನಾಟಕ ಚಲನಚಿತ್ರ ಬೂಂಗ್ ನಿನ್ನೆ ಲಂಡನ್ ನಲ್ಲಿ ಅತ್ಯುತ್ತಮ ಮಕ್ಕಳ ಮತ್ತು ಕುಟುಂಬ ಚಲನಚಿತ್ರಕ್ಕಾಗಿ ಪ್ರತಿಷ್ಠಿತ ಬಾಫ್ಟಾ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ಈ ಗೌರವವು ಭಾರತೀಯ ಚಿತ್ರರಂಗಕ್ಕೆ, ವಿಶೇಷವಾಗಿ ಈಶಾನ್ಯದ ಚಲನಚಿತ್ರಗಳಿಗೆ ಮಹತ್ವದ ಮೈಲಿಗಲ್ಲಾಗಿದೆ. ಇದು ಪ್ರಾದೇಶಿಕ ಕಥೆ ಹೇಳುವ ಜಾಗತಿಕ ಆಕರ್ಷಣೆಯನ್ನು ಒತ್ತಿಹೇಳುತ್ತದೆ. ಫರ್ಹಾನ್ ಅಖ್ತರ್ ಅವರ ಎಕ್ಸೆಲ್ ಎಂಟರ್ಟೈನ್ಮೆಂಟ್ ನಿರ್ಮಿಸಿದ ಮತ್ತು ಲಕ್ಷ್ಮೀಪ್ರಿಯಾ ದೇವಿ ನಿರ್ದೇಶಿಸಿದ ಈ ಚಿತ್ರವು ಮಣಿಪುರಿ ಪದದಿಂದ "ಲಿಟಲ್ ಬಾಯ್" ಎಂಬ ಹೆಸರನ್ನು ಪಡೆದುಕೊಂಡಿದೆ. ಸಾಮಾಜಿಕ ಮತ್ತು ರಾಜಕೀಯ ಅಶಾಂತಿಯ ನಡುವೆ ಬೆಳೆಯುತ್ತಿರುವ ಚಿಕ್ಕ ಹುಡುಗನ ಕಟುವಾದ ಕಥೆಯನ್ನು ಬೂಂಗ್ ಹೇಳುತ್ತಾನೆ. ಕಾಣೆಯಾದ ತನ್ನ ತಂದೆಯನ್ನು ಮರಳಿ ಕರೆತರುವುದು ಬಾಲಾ ಹಿಜಾಮ್ ನಿರ್ವಹಿಸಿದ ತನ್ನ ತಾಯಿಗೆ ಸಂತೋಷವನ್ನು ಪುನಃಸ್ಥಾಪಿಸುತ್ತದೆ ಎಂದು ಮನವರಿಕೆಯಾದ ಬೂಂಗ್ ತನ್ನ ಅತ್ಯುತ್ತಮ ಸ್ನೇಹಿತನೊಂದಿಗೆ ಪ್ರಯಾಣವನ್ನು ಪ್ರಾರಂಭಿಸುತ್ತಾನೆ. ಅವರ ಹುಡುಕಾಟವು ಅವರನ್ನು ಗಡಿ ಪಟ್ಟಣವಾದ ಮೊರೆಹ್ ಗೆ ಮತ್ತು ಮ್ಯಾನ್ಮಾರ್ ಗೆ ಕರೆದೊಯ್ಯುತ್ತದೆ.

<>><><*><><<>

ಅಂಗಾಂಗ ದಾನ ಮತ್ತು ಕಸಿ ಕ್ಷೇತ್ರದಲ್ಲಿ ಭಾರತವು ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹೇಳಿದೆ. ರಾಷ್ಟ್ರೀಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆ, ದೇಶಾದ್ಯಂತ ಅಂಗಾಂಗ ದಾನ, ಹಂಚಿಕೆ ಮತ್ತು ಕಸಿಯಲ್ಲಿ ಅಭೂತಪೂರ್ವ ಪ್ರಗತಿಯನ್ನು ದಾಖಲಿಸಿದೆ. ದೇಶದಲ್ಲಿ ಕಸಿಗಳ ಸಂಖ್ಯೆ ೨೦೧೩ ರಲ್ಲಿ ೫ ಸಾವಿರಕ್ಕಿಂತ ಕಡಿಮೆ ಇದ್ದದ್ದು ೨೦೨೫ ರಲ್ಲಿ ಸುಮಾರು ೨೦ ಸಾವಿರಕ್ಕೆ ಏರಿದೆ. ಇದು ಗಮನಾರ್ಹ ನಾಲ್ಕು ಪಟ್ಟು ಹೆಚ್ಚಳವನ್ನು ಸೂಚಿಸುತ್ತದೆ. ಮೃತ ದಾನಿಗಳು ದಾನ ಮಾಡಿದ ಅಂಗಗಳನ್ನು ಬಳಸಿಕೊಂಡು ಪ್ರಸ್ತುತ ಶೇಕಡಾ ೧೮ರಷ್ಟು ಕಸಿ ಮಾಡಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ನಿನ್ನೆ ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ

ಅಂಗಾಂಗ ದಾನದ ಮಹತ್ವವನ್ನು ಬಿಂಬಿಸಿದರು ಮತ್ತು ದೇಶದಲ್ಲಿ ಅಂಗಾಂಗ ದಾನ ಆಂದೋಲನಕ್ಕೆ ಮತ್ತಷ್ಟು ಉತ್ತೇಜನ ನೀಡಿದರು. ೨೦೨೫ ರಲ್ಲಿ ಸಾವಿನ ನಂತರ ೧ ಸಾವಿರದ ೨೦೦ಕ್ಕೂ ಹೆಚ್ಚು ಕುಟುಂಬಗಳು ತಮ್ಮ ಪ್ರೀತಿಪಾತ್ರರ ಅಂಗಾಂಗಗಳನ್ನು ದಾನ ಮಾಡಲು ಮುಂದೆ ಬಂದಿವೆ ಮತ್ತು ಪ್ರತಿಯೊಬ್ಬ ದಾನಿಯು ಈಗ ಬಹು-ಅಂಗಾಂಗ ದಾನಿಯಾಗಿದ್ದು, ಅನೇಕ ಜೀವನವನ್ನು ಪರಿವರ್ತಿಸಿದೆ ಎಂದು ಸಚಿವಾಲಯ ಹೇಳಿದೆ. ೨೦೨೩ ರ ಸೆಪ್ಟೆಂಬರ್ ೧೭ ರಿಂದ ಆಧಾರ್ ಆಧಾರಿತ ಪರಿಶೀಲನಾ ವ್ಯವಸ್ಥೆಯ ಮೂಲಕ ಸಾವಿನ ನಂತರ ಅಂಗಾಂಗಗಳು ಮತ್ತು ಅಂಗಾಂಶಗಳನ್ನು ದಾನ ಮಾಡಲು ೪.೮ ಲಕ್ಷಕ್ಕೂ ಹೆಚ್ಚು ನಾಗರಿಕರು ನೋಂದಾಯಿಸಿಕೊಂಡಿದ್ದಾರೆ.

<>><><*><><<>

ನಂಬಿಕೆ, ನಾವೀನ್ಯತೆ ಮತ್ತು ಶಾಂತಿ ಹಾಗೂ ಪ್ರಗತಿಯ ಹಂಚಿಕೆಯ ಬದ್ಧತೆಯ ಮೇಲೆ ನಿರ್ಮಿಸಲಾದ ಇಸ್ರೇಲ್ ನೊಂದಿಗಿನ ತನ್ನ ನಿರಂತರ ಸ್ನೇಹವನ್ನು ಭಾರತ ಆಳವಾಗಿ ಗೌರವಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಸಾಮಾಜಿಕ ಮಾಧ್ಯಮ ಪೋಸ್ಟ್ ಗೆ ಪ್ರತಿಕ್ರಿಯೆಯಾಗಿ ಪ್ರಧಾನಿ, ಭಾರತ ಮತ್ತು ಇಸ್ರೇಲ್ ನಡುವಿನ ಬಲವಾದ ಬಾಂಧವ್ಯ ಮತ್ತುಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳ ವೈವಿಧ್ಯಮಯ ಸ್ವರೂಪದ ಬಗ್ಗೆ ನಾನು ಒಪ್ಪುತ್ತೇನೆ ಎಂದು ಹೇಳಿದ್ದಾರೆ. ತಮ್ಮ ಮುಂಬರುವ ಇಸ್ರೇಲ್ ಭೇಟಿಯ ವೇಳೆ ಎರಡೂ ಕಡೆಯ ನಡುವೆ ಮಾತುಕತೆಯನ್ನು ಎದಿರು ನೋಡುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ, ಇಸ್ರೇಲ್ ಪ್ರಧಾನಿ, ಇಸ್ರೇಲ್ ಮತ್ತು ಭಾರತದ ನಡುವಿನ ಬಾಂಧವ್ಯವು ಇಬ್ಬರು ಜಾಗತಿಕ ನಾಯಕರ ನಡುವಿನ ಪ್ರಬಲ ಮೈತ್ರಿಯಾಗಿದೆ ಎಂದು ಹೇಳಿದ್ದಾರೆ. ಎರಡೂ ದೇಶಗಳು ನಾವೀನ್ಯತೆ, ಭದ್ರತೆ ಮತ್ತು ಹಂಚಿಕೆಯ ಕಾರ್ಯತಂತ್ರದ ದೃಷ್ಟಿಕೋನದಲ್ಲಿ ಪಾಲುದಾರರು ಎಂದು ಅವರು ಹೇಳಿದರು. ಹಾಗೆಯೇ ಕೃತಕ ಬುದ್ಧಿಮತ್ತೆಯಿಂದ ಪ್ರಾದೇಶಿಕ ಸಹಕಾರದವರೆಗೆ, ಉಭಯ ರಾಷ್ಟ್ರಗಳ ನಡುವಿನ ಪಾಲುದಾರಿಕೆಯು ಹೊಸ ಎತ್ತರವನ್ನು ತಲುಪುತ್ತಿದೆ ಎಂದು ಅವರು ತಿಳಿಸಿದ್ದಾರೆ.

<>><><*><><<>

ನೇಪಾಳದ ಧಾದಿಂಗ್ ಜಿಲ್ಲೆಯಲ್ಲಿ ಇಂದು ಮುಂಜಾನೆ ಗಜುರಿ ಬಳಿ ಪ್ರಯಾಣಿಕರ ಬಸ್ ತ್ರಿಶೂಲಿ ನದಿಗೆ ಉರುಳಿ ಬಿದ್ದ ಪರಿಣಾಮ ಕನಿಷ್ಠ ೧೮ ಜನರು ಸಾವನ್ನಪ್ಪಿದ್ದಾರೆ. ಕಠ್ಮಂಡುವಿನ ಪಶ್ಚಿಮಕ್ಕೆ ೬೦ ಕಿಲೋಮೀಟರ್ ದೂರದಲ್ಲಿರುವ ಪೃಥ್ವಿ ಹೆದ್ದಾರಿಯಲ್ಲಿ ತೃಶೂಲಿ ನದಿಗೆ ಉರುಳಿ ಬಿದ್ದಿದೆ. ನಸುಕಿನ ೧.೩೦ರ ಸುಮಾರಿಗೆ ಈ ಘಟನೆ ಸಂಭವಿಸಿದ್ದು, ಇಪ್ಪತ್ತಾರು ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಸಶಸ್ತ್ರ ಪೊಲೀಸ್ ಪಡೆಯ ವಕ್ತಾರ ಬಿಷ್ಣು ಪ್ರಸಾದ್ ಭಟ್ಟ ತಿಳಿಸಿದ್ದಾರೆ. ರಕ್ಷಣಾ ಕಾರ್ಯಕ್ಕಾಗಿ ನೇಪಾಳ ಸೇನೆ, ಸಶಸ್ತ್ರ ಪೊಲೀಸ್ ಪಡೆ ಮತ್ತು ನೇಪಾಳ ಪೊಲೀಸ್ ಸಿಬ್ಬಂದಿಯನ್ನು ಸಜ್ಜುಗೊಳಿಸಲಾಗಿದೆ. ಅಪಘಾತದ ಸ್ಥಳದಿಂದ ಹದಿನೇಳು ಶವಗಳನ್ನು ಹೊರತೆಗೆಯಲಾಗಿದ್ದು, ಬಸ್ಸಿನಿಂದ ಗಾಯಗೊಂಡ ೨೮ ಪ್ರಯಾಣಿಕರನ್ನು ರಕ್ಷಿಸಲಾಗಿದೆ ಎಂದು

ವಕ್ತಾರರು ತಿಳಿಸಿದ್ದಾರೆ. ಗಾಯಗೊಂಡ ಪ್ರಯಾಣಿಕರನ್ನು ಚಿಕಿತ್ಸೆಗಾಗಿ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಅಪಘಾತದಲ್ಲಿ ಮೃತಪಟ್ಟವರಲ್ಲಿ ಒಬ್ಬ ಪುರುಷ ಪ್ರಯಾಣಿಕ ನ್ಯೂಜಿಲೆಂಡ್ ಮೂಲದವರಾಗಿದ್ದಾರೆ. ಘಟನೆಯಲ್ಲಿ ಗಾಯಗೊಂಡವರಲ್ಲಿ ಒಬ್ಬ ಜಪಾನಿನ ಮತ್ತು ಡಚ್ ಪ್ರಜೆ ಸೇರಿದ್ದಾರೆ. ಅಪಘಾತಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲವಾದರೂ, ಅತಿಯಾದ ವೇಗವು ಅಪಘಾತಕ್ಕೆ ಕಾರಣವಾಗಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

**<>><><*><><<>**

ಮಾಜಿ ರೈಲ್ವೆ ಸಚಿವ ಮತ್ತು ರಾಜ್ಯಸಭಾ ಸಂಸದ ಮುಕುಲ್ ರಾಯ್ ಕೋಲ್ಕತ್ತಾದ ಖಾಸಗಿ ಆಸ್ಪತ್ರೆಯಲ್ಲಿ ಇಂದು ನಿಧನರಾಗಿದ್ದಾರೆ. ಅವರಿಗೆ ೭೧ ವರ್ಷ ವಯಸ್ಸಾಗಿತ್ತು. ಅನೇಕ ಆರೋಗ್ಯ ಸಮಸ್ಯೆಗಳೊಂದಿಗೆ ಸುದೀರ್ಘ ಹೋರಾಟದ ನಂತರ ರಾಯ್ ಮುಂಜಾನೆ ೧:೩೦ ರ ಸುಮಾರಿಗೆ ನಿಧನರಾದರು ಎಂದು ಅವರ ಮಗ ಶುಭ್ರಾಂಶು ರಾಯ್ ಮಾಹಿತಿ ನೀಡಿದ್ದಾರೆ. ಈ ನಡುವೆ, ಮುಕುಲ್ ರಾಯ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸಂತಾಪ ಸೂಚಿಸಿದ್ದಾರೆ.

**<>><><*><><<>**

ಇಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಸೂಪರ್ ೮ರ ಹಂತದ ಗುಂಪು ೧ರ ಪಂದ್ಯದಲ್ಲಿ ಜಿಂಬಾಬ್ವೆ ತಂಡವು ವೆಸ್ಟ್ ಇಂಡೀಸ್ ತಂಡವನ್ನು ಎದುರಿಸಲಿದೆ. ಪಂದ್ಯವು ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಸೂಪರ್ ೮ರ ಹಂತದ ಗುಂಪು ೧ರ ಪಂದ್ಯದಲ್ಲಿ ಭಾರತ ತಂಡ ೭೬ ರನ್‌ಗಳಿಂದ ದಕ್ಷಿಣ ಆಫ್ರಿಕಾ ವಿರುದ್ಧ ಸೋಲು ಅನುಭವಿಸಿತು. ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ನಿಗದಿತ ೨೦ ಓವರ್‌ಗಳಲ್ಲಿ ಏಳು ವಿಕೆಟ್‌ಗಳಿಗೆ ೧೮೭ ರನ್ ಗಳಿಸಿತು. ಡೇವಿಡ್ ಮಿಲ್ಲರ್ ೩೫ ಎಸೆತಗಳಲ್ಲಿ ೬೩ ರನ್ ಗಳಿಸಿದರು. ೧೮೮ ರನ್‌ಗಳ ಗುರಿ ಬೆನ್ನಟ್ಟಿದ ಭಾರತ ತಂಡ ೧೮.೫ ಓವರ್‌ಗಳಲ್ಲಿ ೧೧೧ ರನ್‌ಗಳಿಗೆ ಆಲೌಟ್ ಆಯಿತು.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**